ಕಷ್ಟದಿಂದ ಅವಳತ್ತ ದೀನ ನೋಟ ಬೀರತೊಡಗಿದೆ. ಅರೆಕ್ಷಣ ಅಚ್ಚರಿಯಲ್ಲಿ ನನ್ನನ್ನೇ ದಿಟ್ಟಿಸಿದ ಅವಳು ಬಳಿಕ ''ನೋ ಪ್ರಾಬ್ಲಮ್'' ಎಂದು ತಾನೇ ಆರ್ಡರ್ ಮಾಡಿದಳು.

''ಹೇಗೆ ಬಂದ್ರಿ? ಬೈಕಿನಲ್ಲಾ?''

ಟೇಬಲ್ ಮೇಲಿದ್ದ ನನ್ನ ಕೂಲಿಂಗ್ ಗ್ಲಾಸನ್ನು ನೋಡಿ ಕೇಳಿದಳು ವೈಶಾಲಿ.

''ಇಲ್ಲ. ಬಸ್ಸಿನಲ್ಲಿ ಬಂದೆ.''

ಸಣ್ಣಗೆ ತುಟಿಕಚ್ಚಿಕೊಂಡು ನುಡಿದೆ. ಬಸ್ಸಿನಲ್ಲಿ ಬರುವವನಿಗೆ ಕೂಲಿಂಗ್ ಗ್ಲಾಸ್ ಯಾಕೆ ಎಂಬ ಪ್ರಶ್ನೆ ನಿಶ್ಶಬ್ದವಾಗಿ ಅವಳ ಕಣ್ಣಿಂದ ಹೊಮ್ಮಿದಂತೆನಿಸಿತು. ನನ್ನ ಬೈಕು ತಗೊಂಡು ಹೋಗು ಎಂದ ರೂಮ್‌ಮೇಟ್ ಗಣೇಶನ ಮಾತನ್ನು ಭಯದಲ್ಲಿ ತಿರಸ್ಕರಿಸಿ ಅವನ ಕೂಲಿಂಗ್ ಗ್ಲಾಸನ್ನು ಮಾತ್ರ ತೆಗೆದುಕೊಂಡು ಬಂದಿದ್ದೆ.

''ಓಹ್ ಹೌದಾ. ನಿಮ್ಮ ವಾಟ್ಸ್‌ಆ್ಯಪ್ ಪ್ರೊಫೈಲ್ ಪಿಕ್‌ನಲ್ಲಿ ಬೈಕ್ ಮೇಲೆ ಕುಳಿತಿರೋ ಫೋಟೊ ಹಾಕಿದ್ರಲ್ಲಾ, ಅದಕ್ಕೇ ಬೈಕಿನಲ್ಲೇ ಬಂದಿರೇನೋ ಅಂದ್ಕೊಂಡೆ'' ಎಂದಳು ವೈಶಾಲಿ.

''ಅಲ್ಲ. ಅದು ನನ್ನದಲ್ಲ. ಗೆಳೆಯನದ್ದು. ಊರಿನಲ್ಲಿ ಬೈಕ್ ಓಡಿಸ್ತೇನೆ, ಆದ್ರೆ ಈ ಬೆಂಗಳೂರಿನ ಟ್ರಾಫಿಕ್ಕಲ್ಲಿ ಓಡಿಸೋಕೆ ಭಯವಾಗತ್ತೆ.''

ಭಯವಾಗುತ್ತೆ ಎನ್ನುವ ಪದವನ್ನು ಬಳಸಬಾರದಿತ್ತೇನೋ ಅನಿಸಿ ಮತ್ತೆ ತುಟಿಕಚ್ಚಿಕೊಂಡೆ. ಈ ದಿನ ನಮ್ಮ ಬದುಕಿನ ಬಗ್ಗೆ, ನಾಳೆಗಳ ಬಗ್ಗೆ ವೈಶಾಲಿಯ ಜೊತೆ ಮನಬಿಚ್ಚಿ ಮಾತನಾಡಬೇಕೆಂದು

